

# ಪಾತರಗಿತ್ತಿ ಪಕ್ಕ ನೋಡತಾನ ಅಕ್ಕ

■ ಪ್ರವೀಣ ಕುಲಕರ್ಣಿ

ಈತ ಕಾಂಬೋಡಿಯಾದ ಫೋಟೊಗ್ರಾಫರ್. ಹೆಸರು ಜುವಾನ್ ಗುಲಿರ್ಮೊ ಜರಾಮಿಲ್ಲೊ ಅಂತ. ನಮ್ಮ ಬೇಂದ್ರೆ ತಾತನ 'ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ / ಹಸಿರು ಹಚ್ಚಿ ಚುಚ್ಚಿ ಮೇಲಕ್ಕರಿಶಿಣ ಹಚ್ಚಿ / ಹೊನ್ನ ಚಿಕ್ಕಿ ಚಿಕ್ಕಿ; ಇಟ್ಟು ಬೆಳ್ಳಿ ಅಕ್ಕಿ...' ಹಾಡನ್ನು ಅರೆದು ಕುಡಿದವನಂತೆ ಕಳೆದ ಹದಿನೈದು ವರ್ಷಗಳಿಂದ ಪಾತರಗಿತ್ತಿಗಳ ಬೆನ್ನು ಬಿದ್ದಿದ್ದಾನೆ ಈತ.

ಜಗತ್ತಿನಲ್ಲಿಯೇ ಅತ್ಯಧಿಕ ಪ್ರಭೇದಗಳ ಪಾತರಗಿತ್ತಿಗಳನ್ನು ಹೊಂದಿದ ದೇಶ ಕಾಂಬೋಡಿಯಾ. ಅಲ್ಲಿ ಪಾತರಗಿತ್ತಿಗಳ ಮೂರು ಸಾವಿರ ಪ್ರಭೇದಗಳು ಪತ್ತೆ ಆಗಿವೆಯಂತೆ. ಈ 'ರೆಕ್ಕೆ ಹೊಂದಿದ ಆಭರಣ'ಗಳನ್ನು ಹುಡುಕಿಕೊಂಡು ಜರಾಮಿಲ್ಲೊ ಅಲೆದ ಕಾಡು–ಮೇಡು, ಹಳ್ಳ–ತೊರೆಗಳಿಗೆ ಲೆಕ್ಕವಿಲ್ಲ. ಜಗತ್ತಿನ ಬೇರೆ ಯಾವೊಬ್ಬ ಫೋಟೊಗ್ರಾಫರ್‌ನ ಬಳಿಯೂ ಇಲ್ಲದಷ್ಟು ಸಾವಿರಾರು ಪ್ರಭೇದಗಳ ಪಾತರಗಿತ್ತಿ ಚಿತ್ರಗಳ ಬಹುದೊಡ್ಡ ಸಂಗ್ರಹ ಈಗ ಈತನ ಬಳಿ ಇದೆ. ಆ ಚಿತ್ರ ಸಂಪುಟ ಬ್ರಿಟಿಷ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ ವತಿಯಿಂದ ಇತ್ತೀಚೆಗಷ್ಟೇ ಪ್ರಕಟವಾಗಿದೆ.

ಕಾಂಬೋಡಿಯಾದಲ್ಲಿ ಈ ಹಿಂದೆ ಪಾತರಗಿತ್ತಿಗಳ ಚಿತ್ರ ತೆಗೆಯುವವರು ಅವುಗಳನ್ನು ಸೆರೆಹಿಡಿದು ಪಾಕೆಟ್‌ನಲ್ಲಿ ಮುಚ್ಚಿಡುತ್ತಿದ್ದರಂತೆ. ಹಾಗೆ ಮುಚ್ಚಿಟ್ಟಾಗ ಆ ಪುಟ್ಟ ಜೀವಿಗಳು ಉಸಿರುಗಟ್ಟಿ ಸಾವನ್ನಪ್ಪುತ್ತಿದ್ದವಂತೆ. ಈ ಪದ್ಧತಿಗೆ ವಿದಾಯ ಹೇಳುವಂತೆ ಮಾಡಿದ ಶ್ರೇಯ ಕೂಡ ಜರಾಮಿಲ್ಲೊನಿಗೆ ಸಲ್ಲುತ್ತದೆ.

ಜೇನುನೊಣಗಳಂತೆ ಪಾತರಗಿತ್ತಿಗಳು ಸಹ ಪರಾಗಸ್ಪರ್ಶ ಪ್ರಕ್ರಿಯೆಯಲ್ಲಿ ಮಹತ್ತರ ಕೊಡುಗೆ ನೀಡುತ್ತವೆ. ಪ್ರಕೃತಿಯ ಬೆಳವಣಿಗೆ ಚಕ್ರವನ್ನು ಉರುಳಿಸುವ ಸನ್ನೆಗೆ ಇವುಗಳು ಸಹ ತಮ್ಮದೇ ಆದ ರೀತಿಯಲ್ಲಿ ಬಲವನ್ನು ತುಂಬುತ್ತವೆ. ಕೊನೆಗೆ ಹಾವುಗಳಿಗೆ, ಪಕ್ಷಿಗಳಿಗೆ ಆಹಾರವೂ ಆಗುತ್ತವೆ. ಪರಿಸರಕ್ಕೆ ಇಷ್ಟೊಂದು ಉಪಕಾರಿಯಾದ 'ಏರೊಪ್ಲೇನ್ ಚಿಟ್ಟೆ'ಗಳು ಅರಣ್ಯನಾಶ, ಅಭಿವೃದ್ಧಿ ಚಟುವಟಿಕೆ ನೆಪದಲ್ಲಿ ನಡೆದಿರುವ ಮಾನವನ ಹಸ್ತಕ್ಷೇಪ ಹಾಗೂ ಜಾಗತಿಕ ತಾಪಮಾನ ಏರಿಕೆ – ಇವೇ ಮೊದಲಾದ ಕಾರಣಗಳಿಂದ ಅಪಾಯದ ಅಂಚಿನಲ್ಲಿವೆ. ಜಗತ್ತಿನಲ್ಲಿ ಪಾತರಗಿತ್ತಿಗಳ ಸಂಖ್ಯೆ ಮತ್ತೆ ಹೆಚ್ಚಬೇಕು ಎನ್ನುವ ಉತ್ಕಟ ಆಕಾಂಕ್ಷೆ ಹೊಂದಿದಾತ ಜರಾಮಿಲ್ಲೊ.

ಹದಿನೈದು ವರ್ಷಗಳ ತನ್ನ ಪಾತರಗಿತ್ತಿ ಧ್ಯಾನದ ಪಯಣದಲ್ಲಿ ಈ ಫೋಟೊಗ್ರಾಫರ್ 2.20 ಲಕ್ಷ ಚಿತ್ರಗಳನ್ನು ಸೆರೆಹಿಡಿದಿದ್ದಾನೆ. 1,500ಕ್ಕೂ ಅಧಿಕ ಪ್ರಭೇದಗಳ ಪಾತರಗಿತ್ತಿಗಳ ಚಿತ್ರಗಳು ಆತನ ಫೋಟೊ ಖಜಾನೆಯಲ್ಲಿದ್ದು, ನೋಡುಗರಿಗೆ ಬೇಂದ್ರೆ ತಾತನ ಹಾಡನ್ನು ಗುನುಗುವಂತೆ ಮಾಡುತ್ತವೆ. ಈ ಚಿತ್ರಗಳನ್ನು ಸೆರೆಹಿಡಿಯಲು ಜರಾಮಿಲ್ಲೊ ರಸ್ತೆಯೇ ಇಲ್ಲದ ದಟ್ಟಕಾಡಿನಲ್ಲಿ ಬಹುದೂರದವರೆಗೆ ಟ್ರೆಕಿಂಗ್ ಮಾಡಿದ್ದಾನೆ. ನದಿಗಳನ್ನು ಪುಟ್ಟ ದೋಣಿಗಳಲ್ಲಿ ದಾಟಿದ್ದಾನೆ. ಬೆಟ್ಟಗಳನ್ನೂ ಏರಿದ್ದಾನೆ. ನಮ್ಮ ಚಾಮರಾಜನಗರದ ಕಾಡಿನಲ್ಲಿದ್ದ ವೀರಪ್ಪನ್‌ನ ಕಾಟದಂತೆ, ಕಾಂಬೋಡಿಯಾದ ಕಾಡುಗಳಲ್ಲಿ ಉದ್ದೀಪನ ಮದ್ದು ಕಾಳದಂಧೆಯಲ್ಲಿ ತೊಡಗಿದವರ ಕಾಟ. ಜೀವದ ಅಪಾಯವನ್ನೂ ಲೆಕ್ಕಿಸದೆ ಪಾತರಗಿತ್ತಿಗಳಿಗಾಗಿ ಅಂತಹ ಕಾಡುಗಳಲ್ಲೂ ಈ ಫೋಟೊಗ್ರಾಫರ್ ನುಗ್ಗಿದ್ದಾನೆ.

ಪಾತರಗಿತ್ತಿಗಳ ಫೋಟೊ ತೆಗೆಯಲು ಹೋಗುವಾಗ ಹೆಗಲಿಗೊಂದು ಕ್ಯಾಮೆರಾ, ಟ್ರೈಪಾಡ್ ಮತ್ತು ಗುಲಾಬಿ ದ್ರಾವಣದ ಒಂದು ಬಾಟಲಿಯನ್ನು ಜತೆಗೆ ಒಯ್ಯಲು ಆತ ಮರೆಯುವುದಿಲ್ಲ. ಗುಲಾಬಿ ದ್ರಾವಣವನ್ನು ಸ್ವತಃ ತಯಾರು ಮಾಡುತ್ತಾನೆ. ಬಂಡೆಗಳ ಮೇಲೆ, ಎಲೆಗಳ ಮೇಲೆ ಆ ದ್ರಾವಣವನ್ನು ಸುರಿದು ಸ್ವಲ್ಪ ಹೊತ್ತು ಕಾದರೆ ಸಾಕು, ಪಾತರಗಿತ್ತಿಗಳ ಸಮೂಹ ಅಲ್ಲಿಗೆ ಬಂದು ಮುತ್ತಿಗೆ ಹಾಕುತ್ತದೆ ಎನ್ನುವುದು ವರ್ಷಗಳ ಅನುಭವದಲ್ಲಿ ಆತ ಕಂಡುಕೊಂಡ ಸತ್ಯ.

'ಪಾತರಗಿತ್ತಿಗಳು ನನ್ನ ಪಾಲಿಗೆ ಮಾಡೆಲ್ ಇದ್ದಂತೆ. ದ್ರಾವಣದ ವಾಸನೆಯಿಂದ ಬರುವ ಅವುಗಳು ತುಸುಹೊತ್ತು ಬಂಡೆಗಳ ಮೇಲೋ ಎಲೆಗಳ ಮೇಲೋ ಕೂರುತ್ತವೆ. ಆಗ ನನ್ನ ಕ್ಯಾಮೆರಾ ಬಿಡುವಿಲ್ಲದಂತೆ ಕಣ್ಣು ಮಿಟುಕಿಸುತ್ತದೆ' ಎಂದು ಜರಾಮಿಲ್ಲೊ ಹೇಳುತ್ತಾನೆ. 'ದ್ರಾವಣವಿಲ್ಲದಿದ್ದರೆ ಎಷ್ಟೋ ಪ್ರಭೇದಗಳ ಪಾತರಗಿತ್ತಿಗಳ ಚಿತ್ರಗಳನ್ನು ನನಗೆ ತೆಗೆಯುವುದು ಸಾಧ್ಯವಿರಲಿಲ್ಲ. ಏಕೆಂದರೆ, ಅವುಗಳು ಸಾಮಾನ್ಯವಾಗಿ ಮರಗಳ ತುತ್ತತುದಿಯಲ್ಲಿ ಬೀಡು ಬಿಟ್ಟಿರುತ್ತವೆ' ಎಂದೂ ವಿವರಿಸುತ್ತಾನೆ.

'ಪಾತರಗಿತ್ತಿ ಚಿತ್ರ ತೆಗೆಯುವುದು ನಿಮ್ಮ ಹವ್ಯಾಸವಾಯಿತು. ಅವುಗಳಿಗೆ ಗುಲಾಬಿ ದ್ರಾವಣ ಹಾಕಿ ಹೊಟ್ಟೆ ತುಂಬಿಸುವ ಕಾಯಕ ಮಾಡುತ್ತಿದ್ದೀರಿ ನಿಜ. ನಿಮ್ಮ ಹೊಟ್ಟೆ ತುಂಬುವುದು ಹೇಗೆ' ಎಂಬ ಪ್ರಶ್ನೆಯನ್ನು ಎಎಫ್‌ಪಿ ಸುದ್ದಿಸಂಸ್ಥೆಯ ಪ್ರತಿನಿಧಿಯೊಬ್ಬರು ಜರಾಮಿಲ್ಲೊ ಮುಂದಿಟ್ಟಿದ್ದರು. 'ನಾನೊಬ್ಬ ರೈತ. ದೊಡ್ಡ ಫಾರ್ಮ್‌ನ ಒಡೆಯ. ಸಣ್ಣ ಬ್ಯುಜಿನೆಸ್ ಕೂಡ ಇದೆ. ಹೊಟ್ಟೆಪಾಡಿಗೆ ಈ ಕಾಯಕ. ಆದರೆ, ಪಾತರಗಿತ್ತಿಗಳ ಸಂಗ ಕೊಡುವಷ್ಟು ಖುಷಿ–ನೆಮ್ಮದಿಯನ್ನು ನನಗೆ ಬೇರೆ ಯಾವ ವೃತ್ತಿಯೂ ಕೊಟ್ಟಿಲ್ಲ' ಎಂಬುದು ಆತನ ಉತ್ತರವಾಗಿತ್ತು.

ಅಂದಹಾಗೆ, ಪುಟ್ಟ ರೆಕ್ಕೆಗಳ ಈ ಸುಂದರಿಯರನ್ನು ಫ್ರೇಮ್‌ಗಳಲ್ಲಿ ಸೆರೆಹಿಡಿಯುವುದು ಅಷ್ಟು ಸುಲಭದ ಕೆಲಸವಲ್ಲ. ಏಕೆಂದರೆ, ಚಿತ್ರ ತೆಗೆಯಲು ದೊಡ್ಡಗಾತ್ರದ ಲೆನ್ಸ್ ಬಳಸಬೇಕಾಗುತ್ತದೆ. ಪಾತರಗಿತ್ತಿಗಳ ಏಕಾಂತಕ್ಕೆ, ಊಟಕ್ಕೆ, ಧ್ಯಾನಕ್ಕೆ ಭಂಗ ಬರದಂತೆ ಅವುಗಳ ದೃಶ್ಯವನ್ನು ಸೆರೆ ಹಿಡಿಯಬೇಕಾಗುತ್ತದೆ. ಅದರಲ್ಲೂ ಒಮ್ಮೆ ಅವುಗಳ ಧ್ಯಾನ ಭಂಗವಾಗಿ ಹಾರಿಬಿಟ್ಟರೆ ಮತ್ತೆ ಬಂದು 'ಲ್ಯಾಂಡ್' ಆಗಲು ತುಂಬಾ ಸಮಯ ಕಾಯಬೇಕಾಗುತ್ತದೆ. ಅಂತಹ ತಾಳ್ಮೆ ಇರುವ ಜರಾಮಿಲ್ಲೊ 'ಪಾತರಗಿತ್ತಿ ತಪಸ್ವಿ'ಯೇ ಸರಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65